ಕರ್ನಾಟಕ ಸರ್ಕಾರ
ರಾಷ್ಟ್ರೀಯ ಆರೋಗ್ಯ ಅಭಿಯಾನ

# ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಾರ್ಯಾಲಯ

## ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿಗಳ ಕಚೇರಿ

# ಜಿ.ಬಿ.-7, ಜಿಲ್ಲಾಡಳಿತ ಭವನ, ಪಟ್ರೇನಹಳ್ಳಿ, ಚಿಕ್ಕಬಳ್ಳಾಪುರ ಜಿಲ್ಲೆ.

Email ID:dhochikballapur@gmail.com. Phone & Fax: 08156-277040

ಸಂಖ್ಯೆ: ಡಿ.ಎಲ್.ಓ/ಚಿಪುರ/KABHI/01/2025-26. ದಿನಾಂಕ: 13/06/2025.

### ::ಅಧಿಸೂಚನೆ::

ವಿಷಯ: ಕರ್ನಾಟಕ ಆರೋಗ್ಯ ಇಲಾಖೆ ವತಿಯಿಂದ ಜಿಲ್ಲಾ ಆಸ್ಪತ್ರೆ ಚಿಕ್ಕಬಳ್ಳಾಪುರದಲ್ಲಿ ಕರ್ನಾಟಕ ಮೆದಳು ಆರೋಗ್ಯ ಉಪಕ್ರಮ ಕಾರ್ಯಕ್ರಮಕ್ಕೆ 2025-26 ನೇ ಸಾಲಿನ ವಿವಿಧ ಹುದ್ದೆಗಳನ್ನು ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸುವ ಬಗ್ಗೆ.

ಉಲ್ಲೇಖ:
1. ಮಾನ್ಯ ಆಯುಕ್ತರ ಪತ್ರದ ಸಂಖ್ಯೆ: ಡಿ ಡಿ – ಮಾನಸಿಕ ಆರೋಗ್ಯ /07/2024-25 (ಇ-1451958) ಪತ್ರದ ದಿನಾಂಕ: 17/04/2025.
2. ಕಡತ ಸಂಖ್ಯೆ: DLO/CBP/KABHI/01/2025-26 Karnataka Brain Health Recruitment. ಕಡಿಕೆ 04 ಮಾನ್ಯ ಜಿಲ್ಲಾಧಿಕಾರಿಗಳ ಅನುಮತಿಯಂತೆ, ದಿನಾಂಕ: 03/06/2025.

*****&&&&*****

ಕರ್ನಾಟಕ ಆರೋಗ್ಯ ಇಲಾಖೆ ವತಿಯಿಂದ ಜಿಲ್ಲಾ ಆಸ್ಪತ್ರೆ ಚಿಕ್ಕಬಳ್ಳಾಪುರದಲ್ಲಿ ಕರ್ನಾಟಕ ಮೆದಳು ಆರೋಗ್ಯ ಉಪಕ್ರಮ ಕಾರ್ಯಕ್ರಮದಡಿಯಲ್ಲಿ, ಮಾನ್ಯ ಆಯುಕ್ತರವರ ಸುತ್ತೋಲೆ ಪತ್ರ ದನ್ವಯ (31/03/2026ರ ಅಂತ್ಯ ದವರೆಗೆ) ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಖಾಲಿಯಿರುವ ಹುದ್ದೆಗಳನ್ನು ತಾತ್ಕಾಲಿಕವಾಗಿ ಗುತ್ತಿಗೆ ಆಧಾರದಲ್ಲಿ ಆನ್‌ಲೈನ್ ಮೂಲಕ ನಿಯಮಾನುಸಾರ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸುವ ಬಗ್ಗೆ.

ವಿಶೇಷ ಸೂಚನೆಗಳು:

- ದಿನಾಂಕ: 13/06/2025 ರಿಂದ 23/06/2025ರ ಸಂಜೆ 4:00 ಗಂಟೆಯೊಳಗಾಗಿ https://chikkaballapur.nic.in ವೆಬ್‌ಸೈಟ್‌ನಲ್ಲಿ ವಿವರಗಳನ್ನು ಪಡೆದು ಆನ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ.
- ಕ್ರಮ ಸಂಖ್ಯೆ (01-05) ರಲ್ಲಿನ ಹುದ್ದೆಗಳಿಗೆ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ದಿನಾಂಕ: 25/06/2025 ರಂದು ಬೆಳಿಗ್ಗೆ 11:00ಕ್ಕೆ ಮೂಲ ದಾಖಲೆಗಳ ಪರಿಶೀಲನೆಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿಗೆ ಹಾಜರಾಗತಕ್ಕದ್ದು. ಸಂಜೆ 4 ಗಂಟೆ ನಂತರ ಬಂದಂತಹ ಅಭ್ಯರ್ಥಿಗಳನ್ನು ತಿರಸ್ಕರಿಸಲಾಗುವುದು.
- ಕ್ರಮ ಸಂಖ್ಯೆ (06) ರಲ್ಲಿನ ಹುದ್ದೆಗೆ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ದಿನಾಂಕ: 26/06/2025 ರಂದು ಬೆಳಿಗ್ಗೆ 11:00ಕ್ಕೆ ಮೂಲ ದಾಖಲೆಗಳ ಪರಿಶೀಲನೆಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿಗೆ ಹಾಜರಾಗತಕ್ಕದ್ದು. ಸಂಜೆ 4 ಗಂಟೆ ನಂತರ ಬಂದಂತಹ ಅಭ್ಯರ್ಥಿಗಳನ್ನು ತಿರಸ್ಕರಿಸಲಾಗುವುದು.
- ಮೂಲ ದಾಖಲಾತಿಗಳ ಪರಿಶೀಲನೆಗೆ ಕಡ್ಡಾಯವಾಗಿ ಒಂದು ಸೆಟ್ ಜೆರಾಕ್ಸ್ (ಅಂಕಪಟ್ಟಿ, ಪದವಿ ಪ್ರಮಾಣಪತ್ರ, ಆದಾಯ ಮತ್ತು ಜಾತಿ ಪ್ರಮಾಣ ಪತ್ರ, ಆಧಾರ್ ಜೆರಾಕ್ಸ್ ಪ್ರತಿ, ಕಂಪ್ಯೂಟರ್ ಸಾಕ್ಷರತಾ ಪ್ರಮಾಣ ಪತ್ರ, ಜನ್ಮ ದಿನಾಂಕ ದೃಢೀಕರಣ ಪ್ರತಿ {ಎಸ್.ಎಸ್.ಎಲ್.ಸಿ ಅಂಕ ಪಟ್ಟಿ} ಮತ್ತು ವಿಳಾಸ ದೃಢೀಕರಣ ಪತ್ರ ಒಳಗೊಂಡಂತೆ) ಪ್ರತಿಗಳೊಂದಿಗೆ ನಿಗಧಿತ ಸಮಯದೊಳಗಾಗಿ ಹಾಜರಾಗುವುದು.
- ಮೂಲ ದಾಖಲೆಗಳ ಪರಿಶೀಲನೆಗೆ ಮೂಲ ದಾಖಲೆಗಳನ್ನು ಹಾಜರು ಪಡಿಸದೇ ಇದ್ದಲ್ಲಿ, ಅಂತಹ ಅಭ್ಯರ್ಥಿಗಳನ್ನು ತಿರಸ್ಕರಿಸಲಾಗುವುದು.
- ಮೂಲ ದಾಖಲಾತಿ ಪರಿಶೀಲನೆಗೆ ಹಾಜರಾಗುವ ಅಭ್ಯರ್ಥಿಗಳಿಗೆ ಇಲಾಖೆ ವತಿಯಿಂದ ಯಾವುದೇ ಪ್ರಯಾಣ ಭತ್ಯೆ ಮತ್ತು ದಿನ ಭತ್ಯೆಯನ್ನು ನೀಡಲಾಗುವುದಿಲ್ಲ.

| ಕ್ರ ಸಂ | ಹುದ್ದೆಗಳ ವಿವರವ | ಖಾಲಿ ಹುದ್ದೆಗಳ ಸಂಖ್ಯೆ | ವಿದ್ಯಾರ್ಹತೆ & ಅನುಭವ | ಅಪೇಕ್ಷಣಿಯ ಅರ್ಹತೆ (Desirable) | ವಯೋಮಿತಿ | ಮಾನಸಿಕ ಸಂಬಾವನೆ |
|---|---|---|---|---|---|---|
| 1 | ನ್ಯೂರಾಲಜಿಸ್ಟ್/ಫಿಸಿಸಿಯನ್ ವೈದ್ಯಕೀಯ ಅಧಿಕಾರಿ | 1 | *DM or DNB Neurology<br>*MD/DNB General Medicine<br>*MBBS With 5 Yrs Experience | *MD or DNB Gen. Medicine2 years of working with neurological disease<br>*MBBS with 5 yrs experience in working disease. with neurological<br>*Candidate with similar past Experience is preferable.<br>*The applicant should be conversant in reading, writing and speaking Kannada language. | 60 ವರ್ಷಕ್ಕಿಂತ ಕಡಿಮೆ ಇರತಕ್ಕದ್ದು | Neurologist- Rs 1,50,000/-<br>Physician - Rs. 1.10,000/<br>Medical Officer Rs.60,000/- |
| 2 | ಜಿಲ್ಲಾ ಸಂಯೋಜಕರು | 1 | * First class Masters in any of the fields of Life Sciences/Public health/Sociology/Rural Development/Economics/Human Resource/SocialWork/Psychology or equivalent.<br>* The applicant should be conversant in reading, writing and speaking Kannada language. | * Experience in coordinating in public health programs<br>* Candidate with similar past experience is preferable. | 45 ವರ್ಷದೊಳಗೆ | Rs.30.000/- |
| 3 | ಫಿಜಿಯೋಥೆರಪಿಸ್ಟ್ | 1 | * BPT from a recognized university * 2 years of experience working in hospital.<br>* The applicant should be conversant in reading, writing and speaking Kannada language. | * 1-2 years experience with evaluation and rehabilitation of patients with neurological disorders.<br>*Candidate with similar past experience is preferable. | 45 ವರ್ಷದೊಳಗೆ | Rs.25,000/- |
| 4 | ಕ್ಲಿನಿಕಲ್ ಸೈಕಾಲಜಿಸ್ಟ್ | 1 | * M Phil in Mental Health & Social obtained Psychology after completion of a full time course 02 years (Regular zero correspondence) which includes supervised clinical training, approved & recognized by the RCI. (or) Post Graduate Degree in Psychology/ Applied Psychology/ Medical & Social Psychology.<br>* The applicant should be conversant in reading, writing and speaking Kannada language. | * One year experience with evaluation and counseling of patients with neurological disorders.<br>* Candidate with similar past experience is preferable. | 45 ವರ್ಷದೊಳಗೆ | Rs. 26,250/- |
| 5 | ಸ್ಪೀಚ್ ಥೆರಪಿಸ್ಟ್ (Speech Language Pathologist) | 1 | * Bachelor in Audiology and Speech Language Pathology.<br>* Candidate with similar past experience is preferable | * One year experience with evaluation and rehabilitation of patients with neurological disorders.<br>* Candidate with similar past experience is preferable. | 45 ವರ್ಷದೊಳಗೆ | Rs.30,000/- |
| 6 | ಶುಶ್ರೂಷಕರು | 1 | * B.Sc in nursing or equivalent degree from institution recognized by Karnataka nursing council of India, if not available General Nursing (GNM) can be considered.<br>* The applicant should be conversant in reading, writing and speaking Kannada language. | * One year experience with evaluation and care of patients with neurological disorders Candidate with similar past experience is preferable.<br>* Candidate with similar past experience is preferable. | 45 ವರ್ಷದೊಳಗೆ | Rs.16839.86/- |

ಷರತ್ತು & ನಿಬಂಧನೆಗಳು.

- ಈ ನೇಮಕಾತಿಯು ರಾಜ್ಯ ವಲಯದ ನಿಯಮಾವಳಿ, ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.
- ಈ ಮೇಲ್ಕಂಡ ಹುದ್ದೆಗಳ ನೇಮಕಾತಿ ಸಂದರ್ಭದಲ್ಲಿ ಚಾಲ್ತಿ ಇರುವ ಸರ್ಕಾರದ ಕಾಲಕಾಲಕ್ಕೆ ಬದಲಾಗುವ ನಿಯಮಗಳಂತೆ ನೇಮಕಾತಿ ಮಾಡಲಾಗುವುದು.
- ಮೆರಿಟ್ ಹಾಗೂ ಇಲಾಖಾ ಅನುಭವದ ಆಧಾರದಲ್ಲಿ (KABHI ಕಾರ್ಯಕ್ರಮ) ಹುದ್ದೆಗಳನ್ನು ಭರ್ತಿ ಮಾಡಲಾಗುವುದು.
- 2025-26ನೇ ಸಾಲಿನ ಸದರಿ ನೇಮಕಾತಿಯಲ್ಲಿಯಾವುದೇ ಹುದ್ದೆಗೆ ಅಗತ್ಯವಿರುವಷ್ಟು ಅಭ್ಯರ್ಥಿಗಳು ಅರ್ಜಿ ಸಲ್ಲಿಸದಿದ್ದಲ್ಲಿ ಅಥವಾ ಹೆಚ್ಚುವರಿ ಅರ್ಜಿಗಳನ್ನು ಸಲ್ಲಿಸಿರುವ ಅರ್ಜಿಗಳಲ್ಲಿ 31/03/2026ರ ಒಳಗೆ ಖಾಲಿಯಾಗುವ ಹುದ್ದೆಗಳನ್ನು Roll out Advertisement ಆಧಾರದಲ್ಲಿ ಭರ್ತಿ ಮಾಡಲಾಗುವುದು ಹಾಗೂ ಅರ್ಜಿ ಸ್ವೀಕೃತಿಯಾಗದೇ ಉಳಿದುಹೋಗುವ ಅಥವಾ ಖಾಲಿ ಇರುವ
ಹುದ್ದೆಗಳಿಗೆ ಪ್ರತಿ ಸೋಮವಾರ ನೇರ ಸಂದರ್ಶನವನ್ನು ಆಯೋಜಿಸಲಾಗುವುದು. ಆಸಕ್ತಿ ಉಳ್ಳ ಅಭ್ಯರ್ಥಿಗಳು ಕಚೇರಿ ಸಮಯದಲ್ಲಿ ನೇರ ಸಂದರ್ಶನಕ್ಕೆ ಹಾಜರಾಗಬಹುದಾಗಿದೆ.
- ಹುದ್ದೆಗಳಿಗೆ ಸೂಚಿಸಿದ ವಿದ್ಯಾರ್ಹತೆ ಇಲ್ಲದಿರುವುದು ಹಾಗೂ ಫಲಿತಾಂಶಕ್ಕೆ ಕಾಯುತ್ತಿರುವ ಅಭ್ಯರ್ಥಿಗಳನ್ನು ಪರಿಗಣಿಸಲಾಗುವುದಿಲ್ಲ.
- ಈ ಗುತ್ತಿಗೆ ಆಧಾರದ ಸೇವೆಯ ಆಯ್ಕೆಯನ್ನು ನಿಧಿಷ್ಠ ಸ್ಥಳಗಳಿಗೆ ಮಾಡಿಕೊಳ್ಳುವುದರಿಂದ ಅಭ್ಯರ್ಥಿಯು ಬೇಡಿಕೆಯ ಮೇಲೆ ಯಾವುದೇ ಸ್ಥಳಕ್ಕೆ ವರ್ಗಾವಣೆಗಾಗಲಿ/ಪರಸ್ಪರ ವರ್ಗಾವಣೆಯಾಗಲೀ ಅಥವಾ ನಿಯೋಜನೆಗಾಗಲೀ ಅವಕಾಶವಿರುವುದಿಲ್ಲ.
- KABHI ಕಾರ್ಯಕ್ರಮದಡಿಯಲ್ಲಿ ಕರ್ತವ್ಯ ನಿರ್ವಹಿಸಿ ಎರಡು ವರ್ಷ ಪೂರೈಸಿದ ಅಭ್ಯರ್ಥಿಗಳಿಗೆ ಶೇಕಡಾ 4 ರಷ್ಟು ಒಂದೂವರೆ ವರ್ಷ ಪೂರೈಸಿದ ಅಭ್ಯರ್ಥಿಗಳಿಗೆ ಶೇಕಡಾ 3ರಷ್ಟು, ಒಂದು ವರ್ಷ ಪೂರೈಸಿದ ಅಭ್ಯರ್ಥಿಗಳಿಗೆ ಶೇಕಡಾ 2ರಷ್ಟು ಮತ್ತು 6 ತಿಂಗಳು ಪೂರೈಸಿದ ಅಭ್ಯರ್ಥಿಗಳಿಗೆ ಶೇಕಡಾ 1ರಷ್ಟು ಅಂಕಗಳನ್ನು ನೀಡಲಾಗುವುದು. ಈ ಶೇಕಡಾವನ್ನು ಅಭ್ಯರ್ಥಿಗಳು ತಮ್ಮ ವಿದ್ಯಾರ್ಹತೆಯಲ್ಲಿ ಪಡೆದಿರುವ ಶೇಕಡಾವಾರು ಅಂಕಗಳನ್ನು ಒಟ್ಟುಗೂಡಿಸಿ, ಒಟ್ಟಾರೆ ಹೆಚ್ಚು ಅಂಕಗಳನ್ನು ಪಡೆದ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು.
- ನೇಮಕಾತಿ ಪ್ರಕ್ರಿಯೆಗೆ ಸಂಬಂಧಿಸಿದ ಯಾವುದೇ ನಿರ್ಧಾರವನ್ನು ಕೈಗೊಳ್ಳುವ ಅಧಿಕಾರವನ್ನು ನೇಮಕಾತಿ ಸಮಿತಿ ಮಾತ್ರ ಹೊಂದಿರುತ್ತದೆ.
- ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳ ಕೆ.ಎಂ.ಸಿ ಮತ್ತು ಕೆ.ಎನ್.ಸಿ ನವೀಕೃತ ಪ್ರಮಾಣ ಪತ್ರವನ್ನು ಮೂಲ ದಾಖಲೆಗಳ ಪರಿಶೀಲನೆ ಸಮಯದಲ್ಲಿ ಕಡ್ಡಾಯವಾಗಿ ಹಾಜರುಪಡಿಸತಕ್ಕದ್ದು, ವ್ಯಾಲಿಡಿಟಿ ಮುಗಿದ ಪ್ರಮಾಣ ಪತ್ರಗಳನ್ನು ಸಲ್ಲಿಸಿದ ಪಕ್ಷದಲ್ಲಿ ಅಂತಹ ಅಭ್ಯರ್ಥಿಯನ್ನು ತಿರಸ್ಕರಿಸಲಾಗುವುದು.
- ಮೂಲ ದಾಖಲಾತಿಗಳ ಪರಿಶೀಲನೆ ನಂತರ ತಾತ್ಕಾಲಿಕ ಆಯ್ಕೆ ಪಟ್ಟಿಗೆ ಸಂಬಂಧಿಸಿದ ವಿವರಗಳನ್ನು https://chikkaballapur.nic.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/-
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು,
ಚಿಕ್ಕಬಳ್ಳಾಪುರ ಜಿಲ್ಲೆ

ಪ್ರತಿಯನ್ನು:-

1. ಮಾನ್ಯ ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ ರವರ ಅವಗಾಹನೆಗೆ ಸಲ್ಲಿಸುತ್ತಾ ತಮ್ಮ ಕಚೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು ಕೋರಿದೆ.
2. ಮಾನ್ಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ ಜಿಲ್ಲೆ ರವರ ಅವಗಾಹನೆಗೆ ಸಲ್ಲಿಸುತ್ತಾ ತಮ್ಮ ಕಚೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು ಕೋರಿದೆ.
3. ಡೀನ್/ನಿರ್ದೇಶಕರು ನಂದಿ ವೈದ್ಯಕೀಯ ಹಾಗೂ ಸಂಶೋಧನಾ ಕೇಂದ್ರ ಚಿಕ್ಕಬಳ್ಳಾಪುರ ರವರ ಮಾಹಿತಿಗಾಗಿ.
4. ಉಪನಿರ್ದೇಶಕರು ಮಾನಸಿಕ ಆರೋಗ್ಯ ವಿಭಾಗ, ಆರೋಗ್ಯ ಸೌಧ ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
5. ಜಿಲ್ಲಾ ನೋಡಲ್ ಅಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ ರವರ ಮಾಹಿತಿಗಾಗಿ ಸಲ್ಲಿಸಿದೆ.

6. ಜಿಲ್ಲಾ ಶಸ್ತ್ರಚಿಕಿತ್ಸಕರು, ಚಿಕ್ಕಬಳ್ಳಾಪುರ ಜಿಲ್ಲೆ ರವರ ಮಾಹಿತಿಗಾಗಿ ರವಾನಿಸುತ್ತಾ ತಮ್ಮ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು ಕೋರಿದೆ.
7. ಜಿಲ್ಲಾ ಮಾಹಿತಿ ಮತ್ತು ತಂತ್ರಜ್ಞಾನ ಅಧಿಕಾರಿಗಳು, ಎನ್.ಐ.ಸಿ, ಜಿಲ್ಲಾಡಳಿತ ಭವನ, ಚಿಕ್ಕಬಳ್ಳಾಪುರ ರವರಿಗೆ ಸಲ್ಲಿಸುತ್ತಾ ಜಿಲ್ಲಾ ವೆಬ್ ಸೈಟ್ ನಲ್ಲಿ ಪ್ರಕಟಿಸಲು ಕೋರಿದೆ.
8. ಹಿರಿಯ ಸಹಾಯಕ ನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ, ಚಿಕ್ಕಬಳ್ಳಾಪುರ ರವರ ಮಾಹಿತಿ ಹಾಗೂ ಅವಗಾಹನೆಗಾಗಿ ಸಲ್ಲಿಸುತ್ತಾ ತಮ್ಮ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು ಕೋರಿದೆ ಎಲ್ಲಾ ಕಾರ್ಯಕ್ರಮ ಅನುಷ್ಠಾನಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ ರವರ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ.
9. ಎಲ್ಲಾ ತಾಲ್ಲೂಕು ಆರೋಗ್ಯಾಧಿಕಾರಿಗಳು ಮತ್ತು ಎಲ್ಲಾ ಸಾರ್ವಜನಿಕ ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ ರವರ ಮಾಹಿತಿಗಾಗಿ ರವಾನಿಸುತ್ತಾ ತಮ್ಮ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು ಸೂಚಿಸಿದೆ.
10. ಕಚೇರಿ ಪ್ರತಿ.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು,
ಚಿಕ್ಕಬಳ್ಳಾಪುರ ಜಿಲ್ಲೆ.